

ಚಿತ್ರಗಳು: ಎಸ್.ವಿ. ಹೂಗಾರ್

'ನಾನು ಉಮ್ಮಾ'.

'ನೀನಾ ಐಸಾ, ನನ್ನ ಮಗನೇ?'

'ಹೌದು ಉಮ್ಮಾ.'

'ಅವ್ರು ಮಲ್ಗಿದ್ದಾರೆ.'

'ಅದ್ಗೊತ್ತು. ಅದ್ಕೇ ಈಗ ಬರ್ತ್ತಿದ್ದೀನಿ.'

ಮಾತುಕತೆಯ ಮಧ್ಯೆ ಆವರಿಸಿಕೊಂಡ ಒಂದು ಸುದೀರ್ಘ ಮೌನ; ಅಳಿಯ ಒಳ ಬಂದು ಹವಾಳನ್ನೂ ಮಗೂನ್ನೂ ನೋಡಬಹುದೋ ಬೇಡ್ವೋ, ಇಬ್ರಲ್ಲೂ ಏನೋ ಹಿಂಜರಿಕೆಯಿದ್ದಂತಿತ್ತು. ಆ ಹೊಯ್ದಾಟದ ಬಗ್ಗೆ ಎಂತದೂ ಹೇಳುವಂತಿರ್ಲಿಲ್ಲವಾದ್ರೂ, ಯಾರೇ ಆಗಲಿ, ಪ್ರತಿಯೊಂದನ್ನೂ ಹೇಳೋದಿಲ್ಲ ಅಲ್ವಾ?

ಅಸನಮ್ಮನಿಗೆ ಕಾಣಿಸ್ದೇಯಿದ್ರೂ ತನ್ನೊಳಗೆದ್ದ ಯುದ್ಧಾನ್ನಾ ಅವನು ಗೆದ್ದವನಂತೆ ಅವಳಿಗೆ ಅನ್ನಿಸ್ತಿತ್ತು. ಅವಳು ಹೊಸ್ತಿಲು ದಾಟಿ, ಹೊರಬಂದು ತನ್ನ ಹಿಂದೆಯೇ ಬಾಗಿಲು ಹಾಕಿಕೊಂಡಳು. ಐಸಾ ಮುನ್ನಡೆದ. ಹಾಗೆ ನೋಡಿದ್ರೆ, ಅವರೇನೂ ಬಾಳಾ ದೂರ ಸಾಗಿರ್ಲಿಲ್ಲ. ಅವರು ದೊಡ್ಡಿ ಗೋಡೆಯ ಮುಂಚಾಚ್ಕೊಂಡಿದ್ದ ಎರಡು ಕಂಬಗಳ ನಡುವಿನ ಮೂಲೆ ತಿರುವುನಲ್ಲಿ ತಿರುಗಿಕೊಂಡಿದ್ರಷ್ಟೆ. ತನ್ನ ಬೆನ್ನು ತಟ್ಟಿ ಎರಡು ಸಾಂತ್ವನದ ಹಿತನುಡಿಯ ಅವಶ್ಯಕತೆಯಿದ್ದುದ್ದಕ್ಕೆ ಅವನು ಬಂದಿದಾನೇನೋ ಅನ್ನೂ ಹಂಗೆ ಕಾಣಿಸ್ತಿತ್ತು.

'ಉಮ್ಮಾ, ಹುಸೇನಿ ಹುಷಾರ್ಗಿದ್ರಾ?'

'ಇದೆ.'

'ಉಮ್ಮಾ, ಹವಾ ಚೆನಾಗಿದಾಳಾ?'

'ಇದಾಳಪಾ.'

'ಉಮ್ಮಾ, ನಿಮ್ಮನ್ ನಾ ಕೇಳ್ಕೊತೀನಿ, ಹುಸೇನಿ ನಿಜಕ್ಕೂ ಆರಾಮವಾಗಿದ್ರಾ?'

'ಓಹ್... ನನ್ ಮಗನೇ, ನೀನ್ಯಾಕೆ ಒಬ್ನೇ ಅಷ್ಟೊಂದು ಸಂಕ್ಟ ಪಡ್ತೀದೀಯಾ? ಹುಸೇನಿ ಹಸಿ ಮಗು, ಹುಟ್ಟಿನ್ನೂ ಹತ್ತು ದಿವ್ಸನೂ ಕಳ್ದಿಲ್ಲ. ಅದ್ ನಿಜಕ್ಕೂ ಹುಷ್ರಾಗಿದೇಂತಾ ಹೆಂಗ್ ಹೇಳ್ಲಿ? ವಯಸ್ಗೆ ಬಂದ್ ಹುಡುಗ್ರೆಲ್ಲ ಮತ್ಯಾರದ್ದೋ ಜನ್ರ ಊರಲ್ಲಿ ಬದ್ಕೋಕೆ ಹೋಗ್ತಿರ್ವಾಗ...'

'ಉಮ್ಮಾ.'

'ಏನಪಾ?'

'ಇಲ್ಲಾ... ಏನಿಲ್ಲಾ...'

'ಮಗಾ, ಈ ಸಂಜೆ ನನಗ್ಯಾಕೋ ನಿನ್ನನ್ ಅರ್ಥಮಾಡ್ಕೊಳ್ಳಕ್ಕಾಗ್ತಿಲ್ಲ. ನೋಡ್, ನಿನ್ನಂತಾ ದೊಡ್ಡ್ ಹುಡುಗ್ರೇ ಮತ್ಯಾರ್ದೋ ಊರಿಗೆ ಬದುಕ್ಕೋಕ್ಕೇಂತಾ ಹೋದ್ರೆ, ನಿಜಕ್ಕೂ ನಾ ತುಂಬಾ ಚೆನ್ನಾಗಿದೀನಂತಾ ಹೋಗಿ ಕೆಲ ದಿನ್ಗಳಾಗ್ತಿದ್ದಂಗೆ ಹೇಳೋಕ್ಕಾಗೋತ್ತೇನ್?'

'ಇಲ್ಲ.'

'ಅವ್ರ ಆಹಾರಕ್ಕೆ ನೀನ್ ಹೊಂದ್ಕೋಬೇಕಾ, ಬೇಡ್ವಾ? ನಿಂಗೂ ಮತ್ತೆ ನಿನ್ ಕುರಿಗಳ್ಗೂ ಮೊದ್ಲಲ್ಲಿ ನೀರ್ ಸಿಗುತ್ತೇಂತಾ ಹುಡ್ಕೋಂಬೇಕೋ ಬೇಡ್ವೋ?'

'ಹೂಂ ಉಮ್ಮಾ.'

'ಮತ್ತೆ ಹೆಂಗಪಾ, ಹುಸೇನಿ ನಿಜಕ್ಕೂ ಹುಷಾರ್ಗಿದ್ಯಾಂತಾ ನನ್ ಕೇಳ್ತೀಯಾ? ಹೊಕ್ಳು ಬಾಳಾ ಬೇಗ ಒಣಗ್ತಾಯಿದೆ... ಒಣಗ್ದೇ ಇರೋಕೆ ಹೆಂಗೆ ಸಾಧ್ಯ, ಹೇಳ್? ಇಲ್ಲ್ ನಾ ಕತ್ತರ್ಸಿದ್ದ ಆಪಾಟಿ ಹೊಕ್ಳಲ್ಲಿ ಒಂದೇ ಒಂದಕ್ಕೂ ಸೊಂಕಾಗಿಲ್ಲ. ಅಂತಾದ್ರಲ್ಲಿ ನಾನೀಗ ನನ್ ಮೊಮ್ಮಗಂದು ಕತ್ತರ್ಸಿ, ಕೊಳಿತಾಯಿದ್ಯಾಂತಾ ಕೂತ್ಕಂಡ್ ನೋಡ್ಲಾ? ಆದ್ರೆ ಅವ್ನಾ ಗಿಳಿಮೂತಿ ಬಗ್ಗೆ ನಾಯೇನೂ ಹೇಳೋಕ್ಕಾಗಲ್ಲಪಾ. ಮಲಾಮ ಚೊಕ್ಕವಾಗಿ, ಶುದ್ಧವಾಗಿ ಮಾಡಿರೋದ್ರಿಂದ, ಎಲ್ಲಾ ಸರಿಯಾಗಿರುತ್ತೆ. ನಿನ್ನ ಕುಟುಂಬಯೇನೂ ಗಂಡಸ್ನನ ಕಳ್ಕೊಂಡೋರ್ರ ಪಟ್ಟೀಲಿಲ್ಲಾ ಅಲ್ವಾ?'

'ಇಲ್ಲಾ ಉಮ್ಮಾ'.

'ಹಾಗಾದ್ರೆ, ನಿನ್ ಹೃದಯ ನಿನ್ ಎದೆಯೊಳ್ಗೆ ಶಾಂತವಾಗಿರ್ಲಿ. ಹುಸೇನಿ ಹುಷಾರಾಗಿದ್ರೂ, ಅದೆಷ್ಟ್ ಹುಷಾರಾಗಿದೆಯೆಂತಾ ಈಗ್ಲೇ ಹೇಳೋಕ್ಕಾಗಲಪಾ.'

'ಗೊತ್ತಾಯ್ತು ಉಮ್ಮಾ... ಆದ್ರೆ ಉಮ್ಮಾ...?'

'ಹೇಳ್ ಮಗಾ.'

'ಉಮ್ಮಾ.. ನಾ ದಕ್ಷಿಣದ ಕಡ್ಗೆ ಹೋಗ್ತಾಯಿದೀನಿ...'

'ಎಲ್ಲಂದೆ?'

'ದಕ್ಷಿಣದ ಕಡೆ...'

'ಎಷ್ಟು ದೂರ?'

'ಸಮುದ್ರದಷ್ಟು ಉಮ್ಮಾ, ನಿಮ್ಗೆಲ್ಲಾ ಅರ್ಥವಾಗುತ್ತೇಂದ್ಕೊತ್ತೀನಿ.'

'ನಾಯಿನ್ನೂ ಮಾತಾಡಿರ್ಲಿಲ್ಲ ಅಲ್ವಾ?'

'ಇಲ್ಲಾ. ನೀವಿನ್ನೂ ಏನೂ ಹೇಳಿರ್ಲಿಲ್ಲ.'

'ಮತ್ಯಾಕೆ ಹಾಗಂದೆ?'

'ಅದೇನೂ ಒಳ್ಳೆಯ ವಿಷ್ಯ ಅಲ್ಲ.'

'ಅಲ್ಹೋಗಿ ಏನ್ ಮಾಡ್ತೀಯಾ?'

'ಕೆಲ್ಸ ಹುಡ್ಕೋತೀನಿ.'

'ಏನ್ ಕೆಲ್ಸಾ?'

'ನಂಗೊತ್ತಿಲ್ಲ.'

'ನಿಂಗೊತ್ತು. ಹುಲ್ಲು ಕತ್ತರ್ಸೋಕೆ ತಾನೇ ಹೋಗ್ತಿದೀಯಾ.'

'ಇರ್ಬೋದು.'

'ಆದ್ರೆ ಮಗಾ, ಬರೀ ಹುಲ್ಲು ಕತ್ತರ್ಸೋಕೆ ನೀ ಯಾಕಷ್ಟ್ ದೂರ ಹೋಗ್ಬೇಕಪಾ? ಇಲ್ಲೇ ಸುತ್ತಲೂ ಬೇಕಾದಷ್ಟು ಇಲ್ವಾ? ಈ ಕೊಪ್ಪಲಿನ ಸುತ್ತಮುತ್ತ... ನಿಮ್ಮಪ್ಪಂದೂ, ಹಳ್ಳೀಲಿರೋ ಬೇರೆಯವ್ರದ್ದೂ...? ಅದನ್ಯಾಕೆ ನೀ ಕತ್ತರ್ಸೋಲ್ಲ?'

'ಉಮ್ಮಾ, ಅದ್ಯಾಂಗಲ್ಲಾ ಅನ್ನೋದ್ ನಿಮ್ಗೂ ಗೊತ್ತು. ನಾ ಅದನ್ನಿಲ್ಲಿ ಮಾಡಿದ್ರೇ ಜನ್ರು ನನ್ನ ಹುಚ್ಚಾಂತ ಅಂದ್ಕೊತ್ತಾರೆ. ಅದ್ರಲ್ಲಿ ಅವ್ರಿಗದು ಇಷ್ಟವಾಗುತ್ತಂತಷ್ಟೇ ಕೇಳಿದ್ದಲ್ಲ ನಾನು, ಆ ಕೆಲ್ಸಕ್ಕೆ ಸರ್ಕಾರ ದುಡ್ಡೂ ಕೊಡುತ್ತಂತೆ.'

'ಹಂಗಿದ್ದರೂ ನಮ್ಮ ಗಂಡಸ್ರೆಲ್ಲಾ ಹುಲ್ಲು ಕತ್ತರಿಸೋಕ್ಕೆ ದಕ್ಷಿಣದ ಕಡ್ಗೆ ಹೋಗಬೇಕಿರ್ಲಿಲ್ಲ. ಅದೇನಿದ್ರೂ ಉತ್ತರದ ತುದೀಲಿರೋರಿಗೆ. ಬಂಜರುಭೂಮೀಲಿರೋ ಅವ್ರಿಗೆ ದಕ್ಷಿಣದ ಕಡೆ ಹೋಗಿ ಹುಲ್ಲು ಕತ್ತರ್ಸೋದು ಅವ್ರ ಕೆಲ್ಸ. ಅದೇನು ನಮ್ಮ ಗಂಡಸ್ರಿಗಲ್ಲ, ಬಿಡು.'

'ಉಮ್ಮಾ... ದಯವಿಟ್ಟು... ಸಮಯವಾಗ್ತಾಯಿದೆ... ಹವಾಯಿನ್ನೂ ಹಸಿ ತಾಯಿ... ಹುಸೇನಿ ನನ್ನ ಮೊದಲ ಮಗು...'

'ಆದ್ರೂ ನೀ ಅವ್ರನ್ನೆಲ್ಲಾ ಬಿಟ್ಟ್ ದಕ್ಷಿಣಕ್ಕೆ ಹೊರ್ಟಿದ್ದಿ. ಹುಲ್ಲ್ ಕತ್ತರ್ಸೋಕ್ಕೆ...'

'ಆದ್ರವ್ರು ಹಸ್ಕೊಂಡಿರೋದನ್ನ ನೋಡ್ಕೋತಾ ನಾ ಇಲ್ಲೇ ಇದ್ರೇನ್ ಪ್ರಯೋಜ್ನ ಉಮ್ಮಾ? ನಿಮ್ಗೇ ಗೊತ್ತು, ಕೋಲಾ ಬೀಜ ತಳ ಕಚ್ಚಿದೆ, ಇಲ್ಲಾಂದ್ರೂ ಇಂತಾ ವ್ಯಾಪಾರ್ದಿಂದ, ಅವ್ರಿಂದೆಷ್ಟು ದುಡ್ಡು ನಂಗೆ ಸಿಗಬೋದಂತಾ ನೀವ್ ಅಂದ್ಕೊಂಡ್ದೀರಾ? ಅದ್ಕೇ ನಾ ಹೋಗ್ತಿದೀನಿ. ವ್ಯಾಪಾರವೂ ಮುರ್ದುಬಿದ್ದಿರೋದ್ರಿಂದ ಯಾವಾಗೆಲ್ಲಾ ಸರಿ ಹೋಗುತ್ತೋ ನಮ್ಗೂ ಗೊತ್ತಿಲ್ಲವಾದ್ರಿಂದ ಆಚೆ ಹೋಗೋದೇ ಒಳ್ಳೇದೇನೋಂತಾ ನಂಗೂ ಅನ್ಸುತ್ತೆ.'

'ಹವಾಗ್ ಗೊತ್ತಾ?'

'ಇಲ್ಲಾ. ಅವಳ್ಗೆ ಗೊತ್ತಿಲ್ಲ.'

ಈ ಹೊತ್ತಲ್ಲಾ ಹೊತ್ನಲ್ಲಿ ಅವಳ್ನೆಬ್ಬಿಸಿ ಹೇಳ್ ಹೋಗೋಕೆ ನೀ ಬಂದೆಯೇನ್?'

'ಇಲ್ಲಾ.'

'ಅಷ್ಟಾದ್ರೂ ಬುದ್ಧಿಯಿದೆಯಲ್ಲ.'

'ಉಮ್ಮಾ, ನಾ ಎಲ್ಲಾನೂ ಅಮದೂ ಮೇಲ್ ಹೊರ್ಸಿ ಹೋಗ್ತಿದೀನಿ. ಅವ್ನು ನಾಳೆ ಬಂದ್ ಹವಾನ್ನ ನೋಡ್ತಾನೆ.'

'ಒಳ್ಳೇದಪಾ'.

'....'

'ಯಾವಾಗ ನೀ ವಾಪಾಸಾಗ್ತೀಂತಾ ನಾವ್